- ಆಕರ್ಷಕ ಮುಖಪುಟದ ಫೆಬ್ರುವರಿ ಸಂಚಿಕೆಯಲ್ಲಿ ಕವಿ ಎಚ್.ಎಸ್. ವೆಂಕಟೇಶ್‌ಮೂರ್ತಿ, ಕತೆಗಾರ ಕೇಶವ ರೆಡ್ಡಿ ಹಂದ್ರಾಳ ಅವರ ಸಂದರ್ಶನಗಳು ಮನಸೆಳೆದವು. ವಿಮರ್ಶಕ ಎಲ್.ಎಸ್. ಶೇಷಗಿರಿ ರಾವ್ ಅವರ ಕುರಿತ ಬರಹ ಸಕಾಲಿಕ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ಎಚ್.ಎಸ್. ವೆಂಕಟೇಶಮೂರ್ತಿ ಅವರ ಸಂದರ್ಶನ ಉತ್ತಮವಾಗಿದೆ.

**ಎನ್. ಶಂಕರ್, ಮೈಸೂರು**

- ಅಂದವಾದ ಮುಖಪುಟದೊಂದಿಗೆ ಬಂದ ಈ ಸಂಚಿಕೆ, ಹಲವು ವಿಷಯ–ವಸ್ತುಗಳಿಂದ ಸಮೃದ್ಧವಾಗಿದೆ. ಲೇಖಕರ ಸಂದರ್ಶನಗಳು ಗಮನ ಸೆಳೆದವು. ವಸುಮತಿ ಉಡುಪ ಅವರ ಕತೆ 'ಅನುರಕ್ತಿ' ಇಷ್ಟವಾಯಿತು.

**ಕಪಿಲಾ, ಮೈಸೂರು**


- ವಿಮರ್ಶಕ ಎಲ್.ಎಸ್. ಶೇಷಗಿರಿ ರಾವ್ ಅವರ ಅಪರೂಪದ ವ್ಯಕ್ತಿತ್ವ ಕುರಿತ ಲೇಖನ ಅರ್ಥಪೂರ್ಣ. ಕಲೀಮ್ ಉಲ್ಲಾ ಅವರ ಪ್ರಬಂಧ ಮುದ ನೀಡಿತು.

**ಬಿ.ಪಿ. ಶ್ರೀಧರ್ ಮೂರ್ತಿ, ತರೀಕೆರೆ**
**ಬಿ.ಕೆ. ಮಂಜುನಾಥ್, ಬಿ.ಜಿ. ಕೆರೆ**

- 'ಗೇ' ಸಮುದಾಯದ ಕಷ್ಟ–ಕಾರ್ಪಣ್ಯಗಳು, ಭಾವನಾತ್ಮಕ ಏರಿಳಿತಗಳ ಬಗ್ಗೆ ಸರಳವಾದ ನೈಜ ಚಿತ್ರಣ ನೀಡಿದ ಕತೆ 'ಸಮಾನಾಂತರ ದಾರಿಗಳು' ಬಹಳ ಇಷ್ಟವಾಯಿತು.

**ಸದಾನಂದ ಹೆಗಡೆಕಟ್ಟೆ, ಮೂಡುಬಿದಿರೆ**

- ಕಲೀಮ್ ಉಲ್ಲಾ ಅವರ ಪ್ರಬಂಧ 'ಒಂದೇ ಗಂಟೆಯಲ್ಲಿ', ಡಾ. ಪ್ರೇಮಲತ ಬಿ. ಅವರ 'ಸಮಾನಾಂತರ ದಾರಿಗಳು', ಹಾಗೂ




ದೀಪಾ ಫಡ್ಕೆ ಅವರ 'ವಿಪ್ರಲಂಬ' ಕತೆಗಳು ಗಮನ ಸೆಳೆದವು.

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**

- 2019ರ 12 ಕೃತಿಗಳನ್ನು ಪರಿಚಯಿಸಿದ 'ವರ್ಷದ ಓದು' ಉತ್ತಮ ಪ್ರಯತ್ನ. ಜ್ಞಾನಪೀಠ ಪ್ರಶಸ್ತಿ ವಿಜೇತ 'ಅಕ್ಕಿತ್ತಂ' ಕುರಿತ ವಿಸ್ತೃತ ಲೇಖನ ಮುದನೀಡಿತು.

**ಎಚ್.ಎನ್. ಸತ್ಯನಾರಾಯಣರಾವ್, ಅರಕಲವಾಡಿ**

- ವಿಷ್ಣು ನಾಯ್ಕ ಅವರ ಕವನ 'ಈ ನಕ್ಷೆಯೊಳಗೆ...' ಸೊಗಸಾಗಿದೆ. ನಿಜ, ಎಲ್ಲಾ ಮನುಷ್ಯರೂ ತಮ್ಮ ತಮ್ಮ ಮರಣವನ್ನು ಒಪ್ಪಿಕೊಳ್ಳಲೇಬೇಕು, ಅದು ಅಂತಿಮ ಸತ್ಯ!

**ನಾರಾಯಣ ಯಾಜಿ, ಶಿರಾಲಿ**

- ಚಿಣ್ಣರ ಚಾವಡಿಯಲ್ಲಿ ಪ್ರಕಟವಾದ 'ಮಂತ್ರಿಯ ಪ್ರಾಮಾಣಿಕತೆ' ಕತೆ ಮಕ್ಕಳಿಗೇ ಅಲ್ಲ, ದೊಡ್ಡವರಿಗೂ ನೀತಿಪಾಠದಂತಿದೆ.

**ಬಾ.ರಂ. ಸುರೇಶ್, ಶಿವಮೊಗ್ಗ**
**ಕೆ.ಆರ್. ಪಾರ್ವತಿ, ವಿಜಯಪುರ**